# <u>ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ</u>

## <u>ನಡಾವಳಿಗಳು</u>

ವಿಷಯ: ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯಾಗಿ ನೇಮಕಗೊಂಡ ನಿಗಮದ/ಕಂಪನಿಯ ಅಧಿಕಾರಿಗಳಿಗೆ ಸಂಭಾವನೆ ನೀಡುವ ಬಗ್ಗೆ.

<u>ಪ್ರಸ್ತಾವನೆ:</u>

ಕ.ವಿ.ಮಂ ನೌಕರರ (ವ.ಶಿ.ನಿ ಮತ್ತು ಮೇ) ನಿಬಂಧನೆಗಳು 1987 ರನ್ವಯ ಕವಿಪ್ರನಿನಿ/ಎಸ್ಕಾಂಗಳ ಅಧಿಕಾರಿಗಳನ್ನು ವಿಚಾರಣಾಧಿಕಾರಿಗಳಾಗಿ ನೇಮಿಸುವುದು ಒಂದು ಸಾಮಾನ್ಯ ವಾಡಿಕೆಯಾಗಿರುತ್ತದೆ. ಆದರೆ ಕವಿಪ್ರನಿನಿ/ಎಸ್ಕಾಂಗಳ ಅಧಿಕಾರಿಗಳನ್ನು ವಿಚಾರಣಾಧಿಕಾರಿಗಳಾಗಿ ನೇಮಕ ಮಾಡಿದಾಗ ಅವರಿಗೆ ಯಾವುದೇ ಸಂಭಾವನೆಯನ್ನು ನೀಡುತ್ತಿರುವುದಿಲ್ಲ. ಆದರೆ ಯಾವುದೇ ಇಲಾಖಾ ವಿಚಾರಣೆಯಲ್ಲಿ ನಿವೃತ್ತ ಜಿಲ್ಲಾ ನ್ಯಾಯಾಧೀಶರು ಅನುಸರಿಸುವ ಕ್ರಮ ಮತ್ತು ಅದಕ್ಕಾಗಿ ಪಡುವ ಶ್ರಮವು ಕವಿಪ್ರನಿನಿ/ಎಸ್ಕಾಂಗಳ ಅಧಿಕಾರಿಗಳಿಗೂ ಇಲಾಖಾ ವಿಚಾರಣಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದಾಗ ಆಗುತ್ತದೆ. ಅಲ್ಲದೆ ಕವಿಪ್ರನಿನಿ/ಎಸ್ಕಾಂಗಳ ಅಧಿಕಾರಿಗಳಿಗೆ ಇಲಾಖಾ ವಿಚಾರಣೆ ನಡೆಸುವುದು ಒಂದು ಹೆಚ್ಚುವರಿ ಕರ್ತವ್ಯವಾಗಿರುತ್ತದೆ.

ಕವಿಪ್ರನಿನಿ/ಎಸ್ಕಾಂಗಳ ಇಲಾಖಾ ವಿಚಾರಣೆಗಳಲ್ಲಿ ಕವಿಪ್ರನಿನಿ/ಎಸ್ಕಾಂಗಳ ಅಧಿಕಾರಿಗಳನ್ನು ಮಂಡನಾಧಿಕಾರಿಗಳಾಗಿ ನೇಮಕಮಾಡಿದಾಗ, ಆಂತಹವರಿಗೆ ವಿಚಾರಣೆಯ ದಿನವೊಂದಕ್ಕೆ ರೂ.400/- ರಂತೆ ಸಂಭಾವನೆ ನೀಡಲಾಗುತ್ತಿದೆ. ಇಲಾಖಾ ವಿಚಾರಣಾಧಿಕಾರಿಗಳಾಗಿ ನೇಮಕವಾಗುವ ಸೇವೆಯಲ್ಲಿರುವ ಅಧಿಕಾರಿಗಳಿಗೆ ಯಾವುದೇ ಸಂಭಾವನೆ ನೀಡದೇ ಇರುವ ಸಂಬಂಧ, ಸೂಕ್ತ ಸಂಭಾವನೆಯನ್ನು ನೀಡುವಂತೆ ಕೋರಿ ಸಲ್ಲಿಸಿಕೊಂಡಿರುವ ಮನವಿಯನ್ನು ಹಾಗೂ ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರದ ದಿನಾಂಕ 03.02.2012 ರ ಆದೇಶ ಸಂಖ್ಯೆ: ಸಿಆಸುಇ 07 ಸೇಇವಿ 2012 ನ್ನು ಕೂಲಂಕುಷವಾಗಿ ಪರಿಶೀಲಿಸಿ, ಕವಿಪ್ರನಿನಿ/ಎಸ್ಕಾಂಗಳ ಅಧಿಕಾರಿಗಳನ್ನು ವಿಚಾರಣಾಧಿಕಾರಿಗಳಾಗಿ ನೇಮಕ ಮಾಡಿದರೆ ಪ್ರೋತ್ಸಾಹಧನ ಅಥವಾ ಸಂಭಾವನೆಯನ್ನು ನೀಡುವುದು ಸೂಕ್ತವೆಂದು ಪರಿಭಾವಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಕವಿಪ್ರನಿನಿ/ಬಿ21/706/1997-98**

**ದಿನಾಂಕ: 17 JAN 2014**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಕ.ವಿ.ಮಂ ನೌಕರರ (ವ.ಶಿ.ನಿ ಮತ್ತು ಮೇ) ನಿಬಂಧನೆಗಳು 1987 ರಡಿ ಕವಿಪ್ರನಿನಿ/ಎಸ್ಕಾಂಗಳ ಅಧಿಕಾರಿ/ನೌಕರರ ವಿರುದ್ಧ ಜರುಗಿಸುವ ಇಲಾಖಾ ವಿಚಾರಣೆಗಳಲ್ಲಿ ಕವಿಪ್ರನಿನಿ/ಎಸ್ಕಾಂಗಳ ಅಧಿಕಾರಿಗಳನ್ನು ವಿಚಾರಣಾಧಿಕಾರಿಗಳಾಗಿ ನೇಮಕಮಾಡಿದಾಗ ಮತ್ತು ನಿಗದಿಪಡಿಸಿದ ಅವಧಿಯಲ್ಲಿಯೇ ವಿಚಾರಣಾ ವರದಿಯನ್ನು ನೀಡುವ ಪ್ರಕರಣಗಳಲ್ಲಿ ಮಾತ್ರ ವಿಚಾರಣಾಧಿಕಾರಿಗಳಿಗೆ ಪ್ರೋತ್ಸಾಹಧನವಾಗಿ ಅಥವಾ ಸಂಭಾವನೆ ರೂಪದಲ್ಲಿ ರೂ 5000/-(ಐದು ಸಾವಿರ ರೂಪಾಯಿಗಳನ್ನು) ನ್ನು ಈ ಆದೇಶದ ದಿನಾಂಕದಿಂದ ಮುಂದೆ ವಹಿಸಲಾಗುವ ಇಲಾಖಾ ವಿಚಾರಣೆಗಳಿಗೆ ನೀಡಲು ಮಂಜೂರಾತಿ ನೀಡಲಾಗಿದೆ.

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)

<u>ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-</u>

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಮೆಸ್ಕಾಂ/ಹೆಸ್ಕಾಂ/ಜೆಸ್ಕಾಂ/ಸೆಸ್ಕ್.
2. ಆರ್ಥಿಕ ಸಲಹೆಗಾರರುಗಳು, ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳು.
3. ಮುಖ್ಯ ಇಂಜಿನಿಯರ್(ವಿ)ಗಳು, ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳು.

www.kptcl.com/eprasarana for information of:

4. ಅಧೀಕ್ಷಕ ಇಂಜಿನಿಯರ್(ವಿ)ಗಳು, ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳು.
5. ಕಾರ್ಯನಿರ್ವಾಹಕ ಇಂಜಿನಿಯರ್(ವಿ)ಗಳು, ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳು.
6. ವ್ಯವಸ್ಥಾಪಕರು (ವಿಚಾರಣೆಗಳು-1/ ಸಿಬ್ಬಂದಿ-1/ ಸಿಬ್ಬಂದಿ-2/ ಕಾನೂನು/ ಆಂತರಿಕ ನಿರ್ವಹಣೆ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
7. ಲೆಕ್ಕಾಧಿಕಾರಿ (ಆಂತರಿಕ ತಪಾಸಣೆ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.